**ಅಸಲು ದಾವ ಸಂಖ್ಯೆ: 41/2024**
**ಪಿ.ಡಬ್ಲೂ -1**

**ದಿ:18-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ RKB ರವರಿಂದ:-**

1. ನನ್ನ ಹೆಸರು ಯಲ್ಲುಬಾಯಿ ಮಹಾದೇವ ಹೋಲಕರ. 2ನೇ ವಾದಿ ನನ್ನ ಗಂಡ ಆಗಿರುತ್ತಾರೆ. ಪ್ರತಿವಾದಿ ನನ್ನ ಮಗನಾಗಿರುತ್ತಾನೆ. ನಮ್ಮ ಕುಟುಂಬಕ್ಕೆ ಸೇರಿದ ಒಂದು ಮನೆ ಇರುತ್ತದೆ. ಸದರಿ ಮನೆಯ ಸಂಖ್ಯೆ 553 ಆಗಿರುತ್ತದೆ. ನನಗೆ 7 ಜನ ಮಕ್ಕಳು ಇರುತ್ತಾರೆ, 6 ಜನ ಹೆಣ್ಣುಮಕ್ಕಳು ಹಾಗೂ ಒಬ್ಬ ಗಂಡುಮಗ. ದಾವಾ ಸ್ವತ್ತಾದ ಮನೆಯು ನನ್ನ ಗಂಡನ ತಂದೆಯ ಮನೆ ಆಗಿರುತ್ತದೆ. ಸರ್ವೆ ನಂಬರ 300/2 ಎಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಈ ದಾವೆಗೂ ಮೊದಲು ನಾನು ಬೇರೆ ಯಾವುದೇ ದಾವೆ ಹೂಡಿರುವುದಿಲ್ಲ. ನನ್ನ ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಯಾವುದೇ ಹಿಸ್ಸೆ ಕೊಟ್ಟಿರುವುದಿಲ್ಲ. ನಾನು ದಾವಾ ಸ್ವತ್ತಿನ ಉತಾರವನ್ನು ನೋಡಿರುವುದಿಲ್ಲ. ದಾವಾ ಸ್ವತ್ತಿನ ಉತಾರದಲ್ಲಿ ನನ್ನ ಹೆಸರು, ನನ್ನ ಗಂಡನ ಹೆಸರು ಹಾಗೂ ನನ್ನ ಮಗನ ಹೆಸರು ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಾವು ಮೂರು ಜನರಿಗೆ ಮಾತ್ರ ಹಿಸ್ಸೆ ಇರುತ್ತದೆ ಎಂದು ನಾವು ಬೇರೆ ಯಾವುದೇ ನ್ಯಾಯಾಲಯದಲ್ಲಿ ಡಿಕ್ರಿ ಪಡೆದಿರುವುದಿಲ್ಲ. ಈ ದಾವೆ ಹೂಡಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ವಾದಪತ್ರದಲ್ಲಿ ಬರೆದಿರುವ ಅಂಶಗಳನ್ನು ವಕೀಲರು ನನಗೆ ಓದಿ ಹೇಳಿರುತ್ತಾರೆ. ಅಸಲು ದಾವಾ ಸಂಖ್ಯೆ 377/2008 ರಂತೆ ನಾನು ಮೊದಲು ದಾವೆ ಹೂಡಿದ್ದೆನಾ ಎಂದರೆ ಸಾಕ್ಷಿ ಅದು ಬೇರೆಯವರು ಹೂಡಿದ್ದರು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಒಟ್ಟು ಎರಡು ಮುಕ್ಕಾಲು ಗುಂಟೆ ಜಮೀನು ಇರುತ್ತದೆ. ನಾವು ಹಾಗೂ ಪ್ರತಿವಾದಿ ಒಂದೇ ಮನೆಯಲ್ಲಿ ಇರುತ್ತೇವೆ ಎಂದರೆ ಸಾಕ್ಷಿ ತಾನು ಹಾಗೂ ಪ್ರತಿವಾದಿ ಬೇರೆ ಬೇರೆ ವಾಸವಿರುವುದಾಗಿ ನುಡಿಯುತ್ತಾರೆ. ನಾವು ಹಾಗೂ ಪ್ರತಿವಾದಿ ಮನೆ ನಂಬರ 553 ರಲ್ಲಿಯೇ

ಇರುತ್ತೇವೆ ಎಂದರೆ ಸರಿ. ಪ್ರತಿವಾದಿಯರ ಕುಟುಂಬದವರು ಸಹ ದಾವಾ ಸ್ವತ್ತಿನಲ್ಲಿ ಇರುತ್ತಾರೆ ಆದರೆ ನಾವೆಲ್ಲರೂ ಒಂದೆ ಮನೆಯಲ್ಲಿ ಬೇರೆ ಬೇರೆ ವಾಸಮಾಡುತ್ತೇವೆ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**